## ಬಂದೀಖಾನೆ
## ಸ್ವಾತಂತ್ರ್ಯ ಉದ್ಯಾನವಾದ ಕಥೆ

ಶಿವಮೊಗ್ಗ ನಗರದ ಹೊರಭಾಗದಲ್ಲಿ ನಿರ್ಮಾಣವಾಗಿದ್ದ ಬಂದೀಖಾನೆಯು ಊರು ಬೆಳೆದಂತೆ ನಗರದ ಕೇಂದ್ರವಾಗಿಬಿಟ್ಟಿತು. ಇದರ ಮುಂಭಾಗದ ರಸ್ತೆ ಜೈಲ್ ರೋಡ್ ಎಂದೇ ಪ್ರಸಿದ್ಧವಾಯಿತು. ಸೌಲಭ್ಯಗಳ ಕೊರತೆ, ಕೈದಿಗಳ ಹೆಚ್ಚಳದಿಂದಾಗಿ ಬಂದೀಖಾನೆಯನ್ನು ನಗರದ ಹೊರವಲಯದಲ್ಲಿ ನಿರ್ಮಿಸಿದ ಹೊಸ ಕಟ್ಟಡಕ್ಕೆ ವರ್ಗಾಯಿಸಲಾಯಿತು.

ಹೀಗಾಗಿ, ನಗರದ ಹೃದಯ ಭಾಗದಲ್ಲಿದ್ದ ಬಂದೀಖಾನೆಯನ್ನು ಮತ್ತು ಅದರ ಸುತ್ತಲಿದ್ದ ವಿಶಾಲ ಆವರಣವನ್ನು ಬೆಂಗಳೂರಿನ ಫ್ರೀಡಂ ಪಾರ್ಕ್‌ನಂತೆ ಅಭಿವೃದ್ಧಿಪಡಿಸಿ ಅದೇ ಹೆಸರನ್ನಿಡಲಾಗಿದೆ. ಈ ಫ್ರೀಡಂ ಪಾರ್ಕ್ ಬಯಲಾಗಿ ಸಾರ್ವಜನಿಕರ ವಾಯುವಿಹಾರಕ್ಕೆ ಅಚ್ಚುಮೆಚ್ಚಿನ ತಾಣವಾಗಿದೆ ಹಾಗೂ ಬೃಹತ್ ಸಾರ್ವಜನಿಕ ಸಭೆಗಳಿಗೂ ಸ್ಥಳವಾಗಿದೆ.

ಇಲ್ಲಿರುವ ತೆಂಗಿನ ತೋಟ, ನಗರದ ಮಧ್ಯದಲ್ಲೇ ಹಳ್ಳಿಯ ವಾತಾವರಣವನ್ನು ಕಲ್ಪಿಸಿದೆ. ಕೆಲ ವಿಶೇಷ ಹಕ್ಕಿಗಳೂ ಇಲ್ಲಿ ನೋಡಸಿಗುತ್ತವೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಇಲ್ಲಿ ಸೈಕ್ಲಿಂಗ್ ವ್ಯವಸ್ಥೆಯನ್ನೂ ಮಾಡಲಾಗಿದೆ. ಒಳಗಿನ ಬೃಹತ್ ಜೈಲು ಕಟ್ಟಡ ಕೇಂದ್ರ ಕೈಗಾರಿಕಾ ಮೀಸಲು ಪಡೆಯ ಬೆಟಾಲಿಯನ್‌ನ ಮುಖ್ಯ ಕಚೇರಿ ಕೂಡ ಆಗಿದೆ. ಕೈದಿಗಳನ್ನು ಬಂಧಿಸಿಡುತ್ತಿದ್ದ ಈ ಬಂಧನದ ಜಾಗ ಈಗ ಸಾವಿರಾರು ಜನ ಸ್ವಚ್ಛ ಗಾಳಿ ಸ್ವೀಕರಿಸುವ ಸುಂದರ ಸ್ವಾತಂತ್ರ್ಯದ ಬಯಲಾಗಿರುವುದು ಶಿವಮೊಗ್ಗಕ್ಕೆ ಹೊಸ ಮೆರುಗು ತಂದಿದೆ.

–ಎಚ್.ಎಸ್. ನವೀನ ಕುಮಾರ್,
ಹೊಸದುರ್ಗ





## ಸ್ನ್ಯಾಪಿಂಗ್ ಟರ್ಟಲ್

ಅಮೆರಿಕದ ಬಾಸ್ಟನ್ ಹತ್ತಿರದ ವರ್ನಾನ್ ಪ್ರದೇಶದಲ್ಲಿ ನನ್ನ ಮಗನ ಮನೆಯಿದೆ. ಒಂದು ದಿನ ಮನೆಯ ಬಾಗಿಲ ಬಳಿ ಬಂದ ಈ ಪ್ರೌಢ ಆಮೆ ಕ್ಯಾಮೆರಾಕ್ಕೆ ಸೆರೆಸಿಕ್ಕಿದ್ದು ಹೀಗೆ. ಮೊಟ್ಟೆಯಿಡಲು ಜಾಗ ಹುಡುಕುತ್ತಾ ಬಂದ ಅದು ಮನೆಯ ಆವರಣದ ಅಲ್ಲಲ್ಲಿ ನೆಲ ತೋಡುತ್ತಿತ್ತು. ಆಂಗ್ಲಭಾಷೆಯಲ್ಲಿ ಇದಕ್ಕೆ ‘ಸ್ನ್ಯಾಪಿಂಗ್ ಟರ್ಟಲ್’ ಎನ್ನುತ್ತಾರೆ. ಅಂದರೆ ಉದ್ದವಾದ ಕುತ್ತಿಗೆ ಮತ್ತು ಬಲವಾದ ಕೊಕ್ಕೆಯ ದವಡೆಯನ್ನು ಹೊಂದಿರುವ, ಕ್ರೂರಸ್ವಭಾವದ ಶಕ್ತಿಯುತ ಉಗುರುಗಳನ್ನೂ ಹೊಂದಿರುವ, ದೊಡ್ಡ ಅಮೇರಿನ್ ಸಿಹಿನೀರಿನ ಆಮೆ. ತನ್ನ ದವಡೆಯಿಂದ ತಟಕ್ಕನೆ ತನ್ನ ಆಹಾರವನ್ನು ಹಿಡಿದುಕೊಳ್ಳುವುದರಿಂದ ಈ ಹೆಸರು ಬಂದಿರಬಹುದು.

–ಸೀತಾ ಎಸ್. ನಾರಾಯಣ, ಹರಿಹರ

